ದಿನಾಂಕ 12-06-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎ.ಎಮ್.ಪಿ ವಕೀಲರಿಂದ.**

ಸರಕಾರದಿಂದ ಸೋಲಾರ್ ಎನರ್ಜಿ ಪ್ರಾಜೆಕ್ಟ ಬಗ್ಗೆ ಲೇಟರ್ ಆಫ್ ಅವಾರ್ಡನ್ನು ಕೊಡುವ ಮೊದಲು ವಾದಿ ಕಂಪನಿಗೆ ಇಷ್ಟು ಭೂಮಿ ಸದರಿ ಪ್ರಾಜೆಕ್ಟನ್ನು ಜಾರಿಗೊಳಿಸಲು ಇರುತ್ತದೆ ಎಂದು ತೋರಿಸಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಹಿರೇಬೂದುರಿನಲ್ಲಿ 2018 ರ ನಂತರ ಸೋಲಾರ್ ಪ್ರಾಜೆಕ್ಟ ಜಾರಿಯಾದ ನಂತರ ರಿನಿವ್ ಸೋಲಾರ್ ಪವಾರ್ ಪ್ರೈವೇಟ್ ಲಿಮಿಟೆಡ್ (ಭೂಮಿ ಪ್ರಕಾಶ ಪ್ರೈವೇಟ್ ಲಿಮಿಟೆಡ್) ನವರು ಭೂಮಿಯನ್ನು ಖರೀದಿ ಮಾಡಿರುವುದಿಲ್ಲ. ಹಿರೇಬೂದುರಿನಲ್ಲಿ ಜಮೀನು ವಾದಿ ಕಂಪನಿಯ ಹೆಸರಿನಲ್ಲಿ ಖರೀದಿ ಆಗಿರುತ್ತದೆ. ಹಿರೇಬೂದುರಿನಲ್ಲಿ ಖರೀದಿ ಮಾಡಿದ ಜಮೀನುಗಳು ಭೂಮಿ ಪ್ರಕಾಶ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಸರ್ವೆ ನಂಬರ 94/4, 94/2, 77/3, 87/2, 77/1, 78/1, 78/2 ಮತ್ತು 95/2 ರ ಪಹಣಿಗಳನ್ನು ತೋರಿಸಲಾಗಿ ಅವುಗಳು ಭೂಮಿ ಪ್ರಕಾಶ ಪ್ರೈವೇಟ್ ಲಿಮಿಟೆಡ್ ಇವರ ಹೆಸರುಗಳಲ್ಲಿ ಇರುತ್ತವೆ ಎಂದು ಸಾಕ್ಷಿ ನೋಡಿ ಒಪ್ಪಿದ್ದು ಈ ಸಮಯದಲ್ಲಿ ವಾದಿ ಪರ ವಕೀಲರು ಮೇಲೆ ಹೇಳಿದ ದಾಖಲೆಗಳು ಈ ದಾವೆಗೆ ಸಂಬಂಧಪಟ್ಟಿರುವುದಿಲ್ಲ ಮತ್ತು ಈ ದಾವೆಯನ್ನು ಇತ್ಯರ್ಥ ಮಾಡಲು ಅಗತ್ಯವಿರುವುದಿಲ್ಲ ಎಂದು ತಕರಾರು ಹೇಳಿದ್ದು ವಾದಿ ಪರ ವಕೀಲರ ಮೇಲೆ ಹೇಳಿದ ತಕರಾರುಗಳಿಗೆ ಒಳಪಟ್ಟು ದಾಖಲೆಗಳನ್ನು ನಿಡಿ-7 ರಿಂದ ನಿಡಿ-14 ಎಂದು ಗುರುತಿಸಲಾಯಿತು. ಹಿರೇಬೂದೂರಿನಲ್ಲಿ ನಾವು ಸೋಲಾರ್ ಪ್ರಾಜೆಕ್ಟನ್ನು ಜಾರಿಗೊಳಿಸಿದ ನಂತರವೂ ಸಹ ನಾವು ಕಾನೂನು ಬಾಹಿರವಾಗಿ ರೈತರಿಂದ ಜಮೀನುಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಕಂಪನಿಗೆ ಯಾವುದೇ 20 ಮೆಗಾವ್ಯಾಟ್ ಸೋಲಾರ್ ಪ್ರಾಜೆಕ್ಟ ದೇವದುರ್ಗ ತಾಲೂಕಿನಲ್ಲಿ ಮಂಜೂರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಮಾಡಿಕೊಂಡ ಕ್ರಯದ ಕರಾರು ಪತ್ರ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಒಬ್ಬರೇ ದಾವಾ ಆಸ್ತಿಯ ಮಾಲೀಕರು ಆಗಿರುವುದಿಲ್ಲ 2 ನೇ ಪ್ರತಿವಾದಿಯೂ ಸಹ ಮಾಲೀಕರಿದ್ದು ಅವರಿಂದ ಕ್ರಯದ ಕರಾರು ಪತ್ರ ಆಗಿರುವುದಿಲ್ಲ ಆದಕಾರಣ ಕ್ರಯದ ಕರಾರು ಪತ್ರ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿ ಕಂಪನಿಯ ಪರವಾಗಿ ಈ ದಾವೆಯನ್ನು ಹೂಡಲು ಅರ್ಹನಾಗಿರುವುದಿಲ್ಲ ಮತ್ತು ನಾನು ವಾದಿ ಕಂಪನಿಯ ಅಥೊರೈಜ್ಡ ರಿಪ್ರಜೆಂಟೆಟಿವ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ನಾನು ಹೂಡಿದ ದಾವೆ

ಕಾನೂನಿನ ಅಡಿಯಲ್ಲಿ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.